**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 884/2014**

**ಪಿ.ಡಬ್ಲ್ಯೂ: 32**

**ಸಿ.ಡಬ್ಲ್ಯೂ: 34**

| | |
|---|---|
| **ಹೆಸರು** | : ಬಿ.ಹೆಚ್. ಚಂದ್ರಶೇಖರ್ |
| **ತಂದೆಯ ಹೆಸರು** | : ಲೇಟ್ ಹರಿರಾಂ |
| **ವಯಸ್ಸು** | : *67* **ವರ್ಷ** |
| **ಉದ್ಯೋಗ** | : ನಿವೃತ್ತ ಎ ಎಸ್ ಐ |
| **ವಾಸಸ್ಥಳ** | : ಭೂತನಗುಂಡಿ, ಭದ್ರಾವತಿ |

**ದಿನಾಂಕ: 19-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು *2011* ರಿಂದ *2015* ಮಾರ್ಚ ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಎ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕ: *01-10-2013* ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಕಾವೇರಿ ಗ್ರಾಮೀಣ ಬ್ಯಾಂಕಿನ ಸಿನಿಯರ್ ಮ್ಯಾನೇಜರ್ ಆದ ಚಾಸಾ-*2* ರವರು ಚಾಸಾ-*1* ರವರು ನೀಡಿರುವ ಲಿಖಿತ ದೂರನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಸದರಿ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ *67/2013* ಕಲಂ *465, 468, 417, 420* ಭಾರತೀಯ ದಂಡ ಸಂಹಿತ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ: *03-10-2013* ರಂದು ಬೆಳಿಗ್ಗೆ *9-00* ಗಂಟೆ ಸಮಯದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಮಹಜರ್ ಕ್ರಮ ಜರುಗಿಸಲು ಹೋಗಿರುತ್ತೇನೆ. ಸ್ಥಳದಲ್ಲಿ ಪಂಚರಾದ ಚಾಸಾ-*20*, ಚಾಸಾ-*21* ಮತ್ತು ಚಾಸಾ *22* ರವರನ್ನು ಬರಮಾಡಿಕೊಂಡು ಆ ಸಮಯದಲ್ಲಿ ಚಾಸಾ-*2* ಮತ್ತು *3* ರವರು ಹಾಜರಿದ್ದು, ಸದರಿಯವರು ಈ ಪ್ರಕರಣಕ್ಕೆ ಸಂಬಂಧಪಟ್ಟ ಬಂಗಾರದಂತಹ ನಕಲಿ ಒಡವೆಗಳನ್ನು ಮತ್ತು ದಾಖಲಾತಿಗಳನ್ನು ತಂದು ಹಾಜರುಪಡಿಸಿರುತ್ತಾರೆ. ಸದರಿ ಬಂಗಾರದಂತಹ ಒಡವೆಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಯಿತು. ಚಾಸಾ-*20* ರವರು ಸದರಿ

ಬಂಗಾರದನತಹ ಒಡವೆಗಳನ್ನು ಓರೆ ಹಚ್ಚಿ ಪರೀಕ್ಷಿಸಲಾಯಿತು. ನಂತರ ಸದರಿ ಬಂಗಾರದಂತಹ ಒಡವೆಗಳನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ಸೀಲು ಮಾಡಲಾಯಿತು ಮತ್ತು ದಾಖಲಾತಿಗಳನ್ನು ಸಹ ವಶಪಡಿಸಿಕೊಳ್ಳಲಾಯಿತು.

ಸದರಿ ಮಹಜರ್ ಕ್ರಮವನ್ನು ಬೆಳಿಗ್ಗೆ *10-30* ರಿಂದ ಮಧ್ಯಾಹ್ನ *4-00* ಗಂಟೆಯವರೆಗೆ ಬರೆದಿರುತ್ತಾರೆ. ಆನಂತರ ವಶಪಡಿಸಿಕೊಳ್ಳಲಾದ ಬಂಗಾರದಂತಹ ಒಡವೆಗಳನ್ನು ಮಾಲುಪಟ್ಟಿಯಲ್ಲಿ ನಮೂದು ಮಾಡಿ ನ್ಯಾಯಾಲಯದ ಅನುಮತಿ ಪಡೆದಕೊಂಡಿರುತ್ತೇನೆ. ವಶಪಡಿಸಿಕೊಂಡ ಮಾಲುಗಳನ್ನು ಎಲೆಕ್ಟ್ರಿಕಲ್ ಯಂತ್ರದಿಂದ ತೂಕ ಮಾಡಲಾಯಿತು.

ದಿಃ *07-10-2013* ರಂದು ಸಂಜೆ *4-00* ಗಂಟೆಗೆ ಶ್ರೀಧರ್ ರವರು ಆರೋಪಿಯನ್ನು ಪತ್ತೆ ಮಾಡಿ ಠಾಣೆಗೆ ಹಾಜರುಪಡಿಸಿದ್ದು, ಆನಂತರ ನಾನು ಅವರ ಹೇಳಿಕೆಗಳನ್ನು ಪಡೆದು, ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇನೆ.

ಸ್ಥಳಕ್ಕೆ ಪಂಚರಾದ ಚಾಸಾ-*23* ಮತ್ತು *24* ರವರ ಸಮಕ್ಷಮ ಆರೋಪಿತರ ಕೈಬರಹಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಕೈಬರಹದ ಕಾಗದಪತ್ರಗಳನ್ನು ಪಡೆದುಕೊಂಡು ಈ ಸ್ಥಳ ಮಹಜರ್ ನ್ನು ಸಂಜೆ *4-30* ರಿಂದ *7-30* ರವರೆಗೆ ಬರೆದು ಅಮಾನತ್ತುಪಡಿಸಿಕೊಂಡ ಮಾಲುಗಳನ್ನು ಮಾಲು ಪಟ್ಟಿ ಸಂಖ್ಯೆ *27/2013* ರಂತೆ ದಾಖಲು ಮಾಡಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿಃ *18-10-2013* ರಂದು ಕಾವೇರಿ ಗ್ರಾಮೀಣ ಬ್ಯಾಂಕಿನ ಗ್ರಾಹಕರಾದ ಉಮೇಶ, ಎಂ .ಡಿ ಲಿಂಗಪ್ಪ, ಸುರೇಶ, ಕುಮಾರ್, ಪುಟ್ಟಸ್ವಾಮಿ, ಕೇಶಮೂರ್ತಿ ಇವರುಗಳು ಹಾಜರಾಗಿದ್ದು, ಪಂಚರಾದ ಉಪೇಂದ್ರ ಮತ್ತು ಎಂ ಸುರೇಶ ಇವರ ಸಮಕ್ಷಮ ಗ್ರಾಹಕರ ಕೈಬರಹಗಳನ್ನು ಪಡೆದುಕೊಂಡು ಕಾಗದ ಪತ್ರಗಳನ್ನು ಅಮಾನತ್ತುಪಡಿಸಿಕೊಂಡು ಮಾಲು ಪಟ್ಟಿ ಸಂಖ್ಯೆ *30/2013* ರಂತೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ಮಹಜರನ್ನು ಮಧ್ಯಾಹ್ನ *1-00* ಗಂಟೆಯಿಂದ *3-00* ಗಂಟೆಯವರೆಗೆ ಜರುಗಿಸಲಾಗಿರುತ್ತದೆ.

ದಿಃ *10-11-2013* ರಂದು ಕಾವೇರಿ ಗ್ರಾಮೀಶ ಬ್ಯಾಂಕಿನ ಗ್ರಾಹಕರಾದ ಚಾಸಾ-*12* ಮತ್ತು *13* ರವರು ಠಾಣೆಗೆ ಬಂದು ಹಾಜರಾಗಿದ್ದು, ಸ್ಥಳಕ್ಕೆ ಪಂಚರಾದ ಕಾಶೀನಾಥ್, ಶ್ರೀನಿವಾಸ್ ಇವರುಗಳ ಸಮಕ್ಷಮ ಗ್ರಾಹಕರ ಕೈಬರಹಗಳನ್ನು ಪಡೆದುಕೊಂಡು ಸದರಿ ಕಾಗದ ಪತ್ರಗಳನ್ನು ಅಮಾನತ್ತುಪಡಿಸಿಕೊಂಡು ಮಾಲು ಪಟ್ಟಿ ಸಂಖ್ಯೆ

*36/2013* ರಂತೆ ದಾಖಲು ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ಮಹಜರನ್ನು ಮಧ್ಯಾಹ್ನ *4-00* ಗಂಟೆಯಿಂದ *5-00* ಗಂಟೆಯವರೆಗೆ ಜರುಗಿಸಲಾಗಿರುತ್ತದೆ.

ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಚಾಸಾ-*35* ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರು ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*1* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*1*(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪ್ರಥಮ ವರ್ತಮಾನ ವರದಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-*60* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*60*(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ/ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*25* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*25*(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ/ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*25* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*25*(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ/ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*27* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*27*(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ/ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-*28* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*28*(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮುದ್ದೆ ಮಾಲಾದ ಎಂ ಓ *-1* ರಿಂದ *7* ನ್ನು ನೋಡಿ ಗುರುತಿಸಿರುತ್ತಾರೆ.

***ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಂ ಕೆ ಟಿ ವಕೀಲರಿಂದ.***

ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ಆರೋಪಿತರ ವಿರುದ್ದ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಮೂರು ಸ್ಥಳ ಮಹಜರ್ ನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ಗ್ರಾಹಕರ ಹೇಳಿಕೆಗಳನ್ನು ಈ ಪ್ರಕರಣದಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಚಾಸಾ-*20* ಅಕ್ಕಸಾಲಿಗರನ್ನು ಬರಮಾಡಿಕೊಂಡು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಬಂಗಾರದ ಒಡವೆಗಳನ್ನು ಓರೆ ಹಚ್ಚಿ ಪರೀಕ್ಷಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಮರುವಿಚಾರಣೆ:*** ***ಇರುವುದಿಲ್ಲ.***

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***